## ಕವಿತೆ




## ವಸುಂಧರಾ ಕದಲೂರು

ಕಲೆ: ಬಸವರಾಜ ಕಲೆಗಾರ




# ಕಡಲೊಂದು

ಕಡಲೊಂದು ತನ್ನ ಅಲೆಗಳನು ಅಲೆದಾಡಲು
ಬಿಟ್ಟಿದ್ದರೆ...

ಅವು ಮರುಳ ದಡವನು ದಾಟಿ
ಘಟ್ಟವೇರಿ ಘಟ್ಟವಿಳಿದು ಕಾನನ
ಬಯಲುಗಳಲ್ಲಲೆದು ಊರಕೇರಿಗಳ
ಕಂಡುಂಡು ನಗರದ ಜನಜಾತ್ರೆಯಲಿ
ಕಳೆದು ಹೋಗುತ್ತಿದ್ದವೇನೋ...

ಒಂದು ಕಡಲು
ತನ್ನ ಅಲೆಗಳನು ಅಂಕೆಯಲಿ
ಇಡದಿದ್ದರೆ...

ಅವು ತಂತಮ್ಮ ಶಕ್ತಿ ಪ್ರದರ್ಶನಕೆ
ಮುಂದಾಗಿ ಒಂದರ ಮೇಲೊಂದು ಏರಿ
ರುದ್ರ ನರುತನವ ತೋರಿ ಒಡಲಜೀವಿಗಳಿಗೆ
ಭಯ ಮೂಡಿಸಿ ದಡದ ಜೀವಸಂಕುಲಕೆ
ದಿಗಿಲು ಹುಟ್ಟಿಸುತ್ತಿದ್ದವೇನೋ...

ಕಡಲೊಂದು
ತನ್ನ ಅಲೆಗಳನು ಕರಗಿಸಿ
ಆವಿಯಾಗಿಸದಿದ್ದರೆ...

ಲೋಕದಲಿ ಮಳೆಬೆಳೆಯಾಗದೆ
ಜನರು ಹಬ್ಬಜಾತ್ರೆಗಳ ಮಾಡದೆ ದೇವರು
ದಿಂಡಿರೂ ಸಹ ಉಪವಾಸವಿದ್ದು
ಯಾರಿಗೆ ಹಿಡಿಶಾಪ ಹಾಕುವುದೆಂದು
ತೋಚದೆ ಕಕ್ಕಾಬಿಕ್ಕಿಯಾಗುತ್ತಿದ್ದವೇನೋ...

ಒಂದು ಕಡಲು
ಮತ್ತೊಂದು ಕಡಲನು ತನ್ನೊಡಲಲಿ
ಕರಗಿಸಿಕೊಳ್ಳದಿದ್ದರೆ...

ಸಪ್ತಸಾಗರಗಳ ನಡುವೆ ಯುದ್ಧ ನಡೆದು
ಮೃಗಖಗಾದಿಗಳು ಸಮುದ್ರದಾಳ ಸೇರಿ
ಡಾರ್ವಿನ್ನನ ಥಿಯರಿಯಂತೆ ಭದ್ರವಾಗಿದ್ದವು
ಬದುಕುಳಿದು ಮನುಷ್ಯರಂಥವರು ಕಂಗೆಟ್ಟು
ಮುಳುಗುವಂತೆ ಮಾಡುತ್ತಿದ್ದವೇನೋ...

ಒಂದು ಕಡಲು,
ತನ್ನಲೆಗಳನು ನಿಯಂತ್ರಿಸಿ ಒಡಲ ಬಡಬಾನಲ
ತಣಿಸಿ ಅಸಂಖ್ಯ ಆಸ್ಫೋಟಗಳನಲ್ಲೇ ದಹಿಸಿ;
ಅಲೆಗಳು ಕ್ರಮ
ತಪ್ಪದಂತೆ ನೋಡಿಕೊಂಡಿದೆಯಲ್ಲ
ಆ ಕಡಲ ಅನಂತ
ಸಂಯಮಕೆ ಧನ್ಯವಾದಗಳು...

